ಇಂಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಕೆರೆ ತುಂಬುವ ಯೋಜನೆ

19 (233) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆರೆ ತುಂಬುವ ಯೋಜನೆಯಡಿಯಲ್ಲಿ ಇಂಡಿ ವಿಧಾನಸಭಾ ಕ್ಷೇತ್ರದ ಯಾವ ಯಾವ ಕೆರೆಗಳನ್ನು ತುಂಬುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರತಿಯೊಂದು ಯೋಜನೆಯ ರೂಪುರೇಷೆಗಳೇನು ಮತ್ತೆ ತಗಲುವ ವೆಚ್ಚವೆಷ್ಟು;

ಇ) ಪ್ರಸ್ತುತ ಯೋಜನೆ ಈಗ ಯಾವ ಹಂತದಲ್ಲಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಡಿ 2 ಕೆರೆಗಳನ್ನು ತುಂಬಿಸುವ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಈ 20 ಕೆರೆಗಳನ್ನು ಮೂರು ಲಿಫ್ಟ್‌ಗಳ ಮೂಲಕ ತುಂಬಿಸುವ ಯೋಜನೆ ಇದ್ದು ಇವುಗಳ ವಿವರವನ್ನು ಈ ಕೆಳಗೆ ನೀಡಿದೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಕೆರೆಗಳ ಹೆಸರು	ಕೆರೆಗಳಡಿಯ ಅಚ್ಚುಕಟ್ಟು ಕ್ಷೇತ್ರ	ಅಂದಾಜು ಮೊತ್ತ
1	ಸಂಖ್ ಲಿಫ್ಟ್ (ಪ್ಯಾಕೇಜ್–4)	1. ಜಿಗಜೀವಣಗಿ 2. ಇಂಚಗೇರಿ 3. ಗೋಡಿಹಾಳ 4. ಚಡಚಣ	471 ಹೆಕ್ಟೇರ್	41.00
2	ಅಣಚಿ ಲಿಫ್ಟ್ (ಪ್ಯಾಕೇಜ್–5)	1. ಅರ್ಜನಾಳ 2. ಗುಂಡವಾನ್–1 3. ಗುಂಡವಾನ್–2 4. ನಂದರಗಿ 5. ಹಡಲಸಂಗ 6. ಹೊರ್ತಿ	2,448 ಹೆಕ್ಟೇರ್	61.80

		7. ಸಾವಲಸಂಗ 8. ಕೂಳರಗಿ		
3	ಭೂಯ್ಯಾರ್ ಲಿಫ್ಟ್ (ಪ್ಯಾಕೇಜ್–6)	1. ಇಂಡಿ ಸೈಟ್–1 2. ಇಂಟಿ ಸೈಟ್–2 3. ಹಂಜಗಿ 4. ರಾಜನಾಳ 5. ತಡವಲಗ 6. ನಿಂಬಾಳ 7. ಕೋತನಾಳ 8. ಅಥರ್ಗಾ	1,201 ಹೆಕ್ಟೇರ್	63.80

ಇ) ಈ ಮೂರು ಯೋಜನೆಗಳ ವಿವರವಾದ ಸರ್ವೆ ತನಿಖಾ ಕಾರ್ಯವನ್ನು ಈಗಾಗಲೇ ಖಾಸಗಿ ಕನ್ಸಲ್‌ಟೆಂಟ್‌ರವರ ಮುಖಾಂತರ ಕೈಗೊಂಡಿದ್ದು, ಅಣಚಿ ಲಿಫ್ಟ್ (ಪ್ಯಾಕೇಜ್–5) ರ ವಿವರವಾದ ಯೋಜನಾ ವರದಿ ಸರ್ಕಾರದಲ್ಲಿ ಪರಿಶೀಲನೆ ಹಂತದಲ್ಲಿದ್ದು, ಉಳಿದ ಎರಡು ಲಿಫ್ಟ್‌ಗಳ ವಿವರವಾದ ಯೋಜನಾ ವರದಿಗಳನ್ನು ತಯಾರಿಸಲಾಗಿದ್ದು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಎಸ್‌ಇಜೆಡ್ ಪ್ರೆಸಿಯಲ್ ಎಕನಾಮಿಕ್ ಝೋನ್‌ಗಳು

20 (234) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗಾಗಿ ಎಸ್‌ಇಜೆಡ್ ಪ್ರೆಸಿಯಲ್ ಎಕನಾಮಿಕ್ ಝೋನ್‌ಗಳನ್ನು ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಮುಂದಿದ್ದಲ್ಲಿ ಯಾವ ಗ್ರಾಮಗಳಲ್ಲಿ ರಚಿಸಲು ಉದ್ದೇಶಿಸಲಾಗಿದೆ?

ಇ) ಎಸ್‌ಇಜೆಡ್‌ಗಳನ್ನು ಇಂಡಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾರಂಭಿಸಲು ಇರುವ ಅನುಕೂಲತೆಗಳು ಯಾವುವು?